( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ20/03/2024**
**ಅಸಲು ದಾವೆ.ನಂ.146/2010**
**ಪಿ.ಡಬ್ಲ್ಯೂ1**

( ಮುಂದುವರೆದ ಪಾಟೀ ಸವಾಲುಃ ಶ್ರೀ. ಎಂ.ಎಲ್.ಡಿ. ವಕೀಲರು 1 ನೇ ಪ್ರತಿವಾದಿ ಪರವಾಗಿ )

ನಾನು ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಸ.ನಂಃ 59/1 ಮತ್ತು ಸ.ನಂಃ 59/2 ರಲ್ಲಿರುವ ಜಮೀನನ್ನು ಸೇರಿಸಿ ದಾವೆಯನ್ನು ಹಾಕಿರುತ್ತೇನೆ. ಸ.ನಂಃ 59/1 ಮತ್ತು 59/2 ಯಾವ ಪೋಡು ಆಗಿತ್ತು ಎನ್ನುವುದನ್ನು ದಾವಾ ಅನುಸೂಚಿಯಲ್ಲಿ ಸೇರಿಸಲಾಗಿದೆ. ಸದರಿ 2 ಜಮೀನುಗಳಿಗೆ ಒಂದೇ ಚೆಕ್ಕು ಬಂದಿಯನ್ನು ತೋರಿಸಲಾಗಿದೆಯೇ ಅಥವಾ ಪ್ರತ್ಯೆಕವಾಗಿ ತೋರಿಸಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಸದರಿ ಸ.ನಂಃ 59/1 ಮತ್ತು 59/2 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇತ್ತು ಎಂದು ವಾದ ಪತ್ರದಲ್ಲಿ ತೋರಿಸಲಾಗಿದೆಯೋ ಎಂದು ನನಗೆ ಗೊತ್ತಿಲ್ಲ

ದಾವಾ ಅನುಸೂಚಿ ಸ್ವತ್ತುಗಳ ಚೆಕ್ಕು ಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ನನಗೆ ದಾವಾ ಅನುಸೂಚಿ ಸ್ವತ್ತುಗಳ 4 ದಿಕ್ಕಿಗೆ ಏನೇನು ಇರುತ್ತದೆ ಎಂದುನನಗೆ ಹೇಳಲು ಆಗುವುದಿಲ್ಲ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಸದರಿ ದಾವೆಯನ್ನು ಸ.ನಂಃ 59/2 ರಲ್ಲಿ 4 ಎಕರೆ 2 ಗುಂಟೆಗೆ ಮಾತ್ರ ಸಲ್ಲಿಸಿದ್ದು ಈಗ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂಃ 59/1 ರಲ್ಲಿರುವ 2 ಎಕರೆ 20 ಗುಂಟೆ ಜಮೀನನ್ನು ನನ್ನ ಚಿಕ್ಕಪ್ಪಂದಿರಿಗೆ 25,000/- ರೂ.ಗಳಿಗೆ ಮಾರಾಟ ಮಾಡಿರುವುದರಿಂದ ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2 ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಲಾಗಿದೆ ಎಂದು ನುಡಿಯುತ್ತಾರೆ. ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನೀವು 2 ಜಮೀನುಗಳನ್ನು ಸೇರಿಸಿ ದಾವೆಯನ್ನು ಹಾಕಿರವುದಾಗಿ ಹೇಳಿರುವುದರಿಂದ 2014 ನೇ ಇಸವಿಯಲ್ಲಿ ಸದರಿ 2 ಎಕರೆ 20 ಗುಂಟೆ ಜಮೀನನ್ನು ಸೇರಿಸುವ ಪ್ರಮೇಯವೇ ಬರುವುದಿಲ್ಲ ಎಂದರೆ ಸಾಕ್ಷಿಯ ವಿಚಾರಣೆಯ ಸಮಯದಲ್ಲಿ ಅದನ್ನು ಸೇರಿಸಲಾಗಿದೆ ಎಂದು ನುಡಿಯುತ್ತಾರೆ.

ನೀವು ಸ.ನಂಃ 59/5 ರಲ್ಲಿ 2 ಗುಂಟೆ ಜಮೀನನ್ನು ಜಯಮ್ಮರವರಿಗೆ ಬಿಟ್ಟುಕೊಡಲಾಗಿದೆ ಎಂದು ನಿಮ್ಮ ವಾದ ಪತ್ರದಲ್ಲಿ ಹೇಳಿರುತ್ತೀರಿ ಸದರಿ ಜಯಮ್ಮನವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಲಾಗಿದೆಯೇ ಎಂದರೆ ಸಾಕ್ಷಿಯ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕೆ ಸದರಿ 2

ಗುಂಟೆ ಜಮೀನು ಜಯಮ್ಮನವರಿಗೆ ಕೊಡಲಾಗಿದೆ ಎಂಬುದನ್ನು ಈ ದಾವೆಯಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸ.ನಂಃ 59/1 ಮತ್ತು 59/2 ರ ಜಮೀನು ಪ್ರತ್ಯೇಕ ಪ್ರತ್ಯೇಕವಾಗಿ ಪೋಡು ಆದ ನಂತರ ಸದರಿ ಎಲ್ಲಾ ಜಮೀನಿಗೆ ಪ್ರತ್ಯೇಕ ಚೆಕ್ಕು ಬಂದಿಯನ್ನು ತೋರಿಸಿರುವುದಿಲ್ಲ. 2010 ನೇ ಇಸವಿಯಲ್ಲಿ ಪಹಣಿಯನ್ನು ಪಡೆದುಕೊಂಡ ಪ್ರಕಾರ ಚೆಕ್ಕು ಬಂದಿಯನ್ನು ಕೊಡಲಾಗಿದೆ ಎಂದು ನುಡಿಯುತ್ತಾರೆ. ಎಷ್ಟನೇ ಇಸವಿಯಲ್ಲಿ ನನ್ನ ಚಿಕ್ಕಪ್ಪಂದಿರು ಜಮೀನುಗಳನ್ನು ಪ್ರತ್ಯೇಕವಾಗಿ ಪೋಡು ಮಾಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸ.ನಂಃ 59/1 ಮತ್ತು 59/2 ರ ಜಮೀನುಗಳಿಗೆ ಒಂದೇ ಚೆಕ್ಕು ಬಂದಿಯನ್ನು ಕೊಡಲಾಗಿದೆ ಸಾಕ್ಷಿಯು ಮುಂದುವರೆದು 2010 ರಲ್ಲಿ ಹೇಗೆ ತೋರಿಸಲಾಗಿತ್ತೋ ಅದೇ ರೀತಿ ಇರುತ್ತದೆ ಎಂದು ನುಡಿಯುತ್ತಾರೆ.

ದಾವಾ ಅನುಸೂಚಿ ಸ್ವತ್ತುಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಇತ್ತೀಚೆಗೆ ಪರಿಶೀಲಿಸಿರುತ್ತೇನೆ ಅದರೆ ನಾನು ದಾಖಲೆಗಳನು ಪಡೆದುಕೊಂಡಿಲ್ಲ. ನಾನು ಎಷ್ಟನೇ ಇಸವಿಯ ಪಹಣಿಗಳನ್ನು ವಿಚಾರಣೆಯ ಸಮಯದಲ್ಲಿ ಹಾಜರು ಪಡಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. 2019 ನೇ ಸಾನಲ್ಲಿ ನಾನು ದಾವಾ ಅನುಸೂಚಿ ಸ್ವತ್ತುಗಳು ಪ್ರತ್ಯೇಕ ಪೋಡು ಆಗಿರುವುದಕ್ಕೆ ಸಂಬಂಧಪಟ್ಟ ಪಹಣಿಗಳನ್ನು ವಿಚಾರಣೆಯ ಸಮಯದಲ್ಲಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿ, ದಾವಾ ಅನುಸೂಚಿ ಸ್ವತ್ತುಗಳು ಪ್ರತ್ಯೇಕವಾಗಿ ಯಾವ ಯಾವ ಪೋಡುಗಳು ಆಗಿದೆ ಎಂದು ನನ್ನ ದಾವಾ ಪತ್ರದಲ್ಲಿ ಸೇರಿಸಲು ತೊಂದರೆ ಇತ್ತು

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪಹಣಿಗಳಿಗೆ ಸಂಬಂಧಪಟ್ಟಂತೆ ವಿಚಾರಗಳನ್ನು ನಿಖರವಾಗಿ ವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ ಸದರಿ ವಿಚಾರವನ್ನು ಯಾವಾಗ ಹೇಳಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಮ್ಮ ಒಟ್ಟು ಕುಟುಂಬದಲ್ಲಿ ಇದ್ದಾಗ ದೇವರಾಜೇಗೌಡರವರಿಗೆ ಒಟ್ಟು ಕುಟುಂಬದ ಸ್ವತ್ತನ್ನು ಮಾರಾಟ ಮಾಡಿದ್ದು ಸದರಿ ದೇವರಾಜೇಗೌಡರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ದೇವರಾಜೇಗೌಡರವರಿಗೆ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮದುವೆಯನ್ನು ನನ್ನ ಚಿಕ್ಕಪ್ಪಂದಿರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ಮತ್ತು ನಿಮ್ಮ ತಂಗಿಯ ಮದುವೆಗಾಗಿ ನಿಮ್ಮ ಚಿಕ್ಕಪ್ಪ 2 ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ

ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಆ ರೀತಿ ಮಾರಟ ಮಾಡಿರುವುವ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನಗೆ ಈಗ ಸುಮಾರು 50 ವರ್ಷ ಆಗಿರಬಹುದು. 1992 ರಲ್ಲಿ ನನಗೆ 18 ವರ್ಷ ತುಂಬಿತ್ತು ಎಂದರೆ ಸರಿಯಲ್ಲ. ನನ್ನ ಜನನ ದಿನಾಂಕ ನನಗೆ ಹೇಳಲು ಆಗುವುದಿಲ್ಲ. ನನ್ನ ವಿದ್ಯಾಬ್ಯಾಸಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇರುತ್ತದೆ. ನನ್ನ ವಿದ್ಯಾಬ್ಯಾಸಕ್ಕೆ ಸಂಬಂಧಪಟ್ಟ ದಾಖಲೆಗಳ ಪೈಕಿ ಯಾವ ದಾಖಲೆಯನ್ನು ನನ್ನ ಜನನ ದಿನಾಂಕವನ್ನು ಹೇಳಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಆದ್ದರಿಂದ ನನಗೆ ನಮ್ಮ ಒಟ್ಟು ಕುಟುಂಬದ ಯಾವುದೇ ವಿಚಾರಗಳು ಗೊತ್ತಿಲ್ಲ ಎಂದರೆ ಸರಿಯಲ್ಲ.

1992 ರಲ್ಲಿ ಸ್ವತ್ತುಗಳನ್ನು ನನ್ನ ಚಿಕ್ಕಪ್ಪಂದಿಗೆ ಬರೆದುಕೊಟ್ಟ ನಂತರ ನನ್ನ ತಾಯಿ ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಲು ಯಾವುದೇ ತಕರಾರು ಇಲ್ಲ ಎಂದು ತಹಶೀಲ್ದಾರವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸ.ನಂಃ 59/1 ಮತ್ತು 59/2 ರ ಜಮೀನಿನಲ್ಲಿ ಹಾದು ಹೋಗಿರುವ ರಸ್ತೆಯ ವಿಸ್ತೀರ್ಣವನ್ನು ಹೊರತು ಪಡಿಸಿ ಎಷ್ಟು ಉಳಿಕೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಇತ್ತೀಚೆಗೆ ನಾನು ದಾವಾ ಅನುಸೂಚಿ ಸ್ವತ್ತಿನ ಹತ್ತಿರ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ದಾವಾ ಅನುಸೂಚಿ ಸ್ವತ್ತಿನ ಬಳಿ ಹೋದಾಗ ಪ್ರತಿ ಬಾರಿಯೂ ರಾಜಿ ಮಾಡಿಕೊಳ್ಳೋಣ ಎಂದು ಹೇಳಿ ನನ್ನ ಜೊತೆ ಜಗಳ ಮಾಡುತ್ತಾರೆ ಎಂದು ನುಡಿಯುತ್ತಾರೆ. ದಿಃ26-11-1992 ರಲ್ಲಯೇ ನಮ್ಮ ಹಿಸ್ಸಾ ಭಾಗದ ಸ್ವತ್ತನ್ನು ನೋಂದಾಯಿತ ಕ್ರಯ ಪತ್ರದ ಮೂಲಕ ಚಿಕ್ಕಪ್ಪಂದಿಗೆ 25,000/- ರೂ.ಗಳಿಗೆ ಮಾರಾಟ ಮಾಡಿರುವುದರಿಂದ ದಾವಾ ಅನುಸೂಚಿ ಸ್ವತ್ತುಗಳಲ್ಲಿ ನನಗೆ ಯಾವುದೇ ಹಿಸ್ಸಾ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಸದರಿ ಕ್ರಯ ಪತ್ರ ನೋಂದಣಿಯಾಗುವ ದಿನ ನೋಂದಾಣಾಧಿಕಾರಿಯವರ ಕಚೇರಿಯಲ್ಲಿ ನಾನು ನನ್ನ ತಾಯಿ ಮತ್ತು ಸಾಕ್ಷಿಗಳು ಹಾಜರಿದ್ದು, ದಿಃ26-11-1992 ರಲ್ಲಿಯೇ ಸದರಿ ಕ್ರಯ ಪತ್ರವನ್ನು ನೋಂದಣಿ ಮಾಡಿಸಿಕೊಡಲಾಗಿದೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದಲ್ಲಿ ಯಶೋಧರವರ ಮದುವೆ ಖರ್ಚಿಗೆ ಮತ್ತು ಬ್ಯಾಂಕ್ ಸಾಲ ಹಾಗೂ ಕೈ ಸಾಲವನ್ನು ತೀರಿಸುವ ಉದ್ದೇಶದಿಂದ ಸ್ವತ್ತನ್ನು ಮಾರಾಟ ಮಾಡುತ್ತಿರುವುದಾಗಿ ನಮೂದು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮಗೆ ಮೋಸ

ಮಾಡುವ ಉದ್ದೇಶದಿಂದ ಸದರಿ ಕ್ರಯ ಪತ್ರವನ್ನು ಮಾಡಿಕೊಳ್ಳಲಾದೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರದಲ್ಲಿ ನಮಗೆ ಯಾವುದೇ ಜೀವನಾಂಶ ಭಾಗಾಂಶ ಮತ್ತು ಜೇಷ್ಟಾಂಶ ಇಲ್ಲ ಎಂದು ಬರೆದುಕೊಟ್ಟು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಕ್ರಯ ಪತ್ರದಲ್ಲಿರುವ ಎಲ್ಲಾ ಅಂಶಗಳು ನನಗೆ ನನ್ನ ತಾಯಿಗೆ ಮತ್ತು ತಂಗಿಗೆ ತಿಳಿದಿದ್ದರೂ ಕೂಡ ಏನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವನಗುಡಿಯಲ್ಲಿರುವ ಮನೆಯನ್ನು ಉದ್ದೇಶ ಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ತದನಂತರವಾದರೂ ಸದರಿ ಬಸವನಗುಡಿಯಲ್ಲಿರುವ ಮನೆಯನ್ನು ಸೇರಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು 2010 ರಿಂದ 2012 ರ ವರೆಗೂ ಕೂಡ ರಾಜಿ ಮಾಡಿಕೊಳ್ಳೋಣ ಎಂದೇ ಹೇಳುತ್ತಿದ್ದರು, ಆದ್ದರಿಂದ ಸೇರಿಸಿಲ್ಲ ಎಂದು ನುಡಿಯುತ್ತಾರೆ. 2014 ರಲ್ಲಿ ಕೆಲವು ಸ್ವತ್ತುಗಳನ್ನು ಸೇರಿಸಿದ್ದು, ಆ ಸಮಯದಲ್ಲಿ ಸದರಿ ಮನೆಯನ್ನು ಸೇರಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಹೌದು ಎಂದುನುಡಿಯುತ್ತಾರೆ.

ಸದರಿ ಮನೆಯನ್ನು ನೀವೇ ಬಾಡಿಗೆಗೆ ಕೊಟ್ಟಿರುವುದರಿಂದ ಅದನ್ನು ಈ ದಾವೆಯಲ್ಲಿ ಸೇರಿಸಿದರೆ ತೊಂದರೆ ಆಗುತ್ತದೆ ಸೇರಿಸಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿದು, ಮುಂದುವರೆದು 2017 ರವರೆಗೂ ತೀರ್ಮಾನ ಮಾಡಿಕೊಳ್ಳೋಣ ಎಂದು ಹೇಳುತಿದ್ದರು ಎಂದು ನುಡಿಯುತ್ತಾರೆ. ಆ ತೀರ್ಮಾನ ಮಾಡಿಕೊಳ್ಳೋಣ ಎಂದು ನನಗೆ ಬರವಣಿಯ ಮೂಲಕ ಬರೆದುಕೊಟ್ಟಿರುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.

ನನ್ನ ಅಜ್ಜ ಬದುಕಿದ್ದ ಸಮಯದಲ್ಲಿಯೇ ಸದರಿ 4 ಎಕರೆ 2 ಗುಂಟೆ ಜಮೀನನ್ನು ನನ್ನ ಚಿಕ್ಕಂದಿರು ತಲಾ 2 ಎಕೆರ 1 ಗುಂಟೆ ರೀತ್ಯಾ ಹಿಸ್ಸೆ ಮಾಡಿಕೊಂಡು ನಂತರ ನನ್ನ ಅಜ್ಜ 2 ಎಕರೆ 20 ಗುಂಟೆ ಜಮೀನನ್ನು ಖರಿದಿಸಿ ನನ್ನ ತಂದೆಯ ಹೆಸರಿಗೆ ಹಿಸ್ಸಾ ರೂಪವಾಗಿ ಬರೆಯಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜ ಬದುಕಿದ್ದ ಸಮಯದಲ್ಲಿ ಎಲ್ಲಾರಿಗೂ ಹಿಸ್ಸೆ ಮಾಡಿಕೊಟ್ಟಿದ್ದು, ನನ್ನ ತಂದೆಗೆ 20 ಗುಂಟೆ ಹೆಚ್ಚುವರಿ ಜವೀನನ್ನುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

1977 ರಲ್ಲಿಯೇ ಆ ರೀತಿ ಹಿಸ್ಸೆ ಮಾಡಿಕೊಂಡಿರುವುರಿಂದ ಸದರಿ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆ ರೀತಿ ವಿಭಾಗ ಮಾಡಿಕೊಂಡಿರುವ ವಿಚಾರವನ್ನು ನಿಮ್ಮ ತಂದೆ ತಾಯಿಗಳಿಗಂದ ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದು ಆ ರೀತಿ ಯಾವುದೇ ವಿಭಾಗ ಆಗಿಲ್ಲ

ಎಂದು  ನುಡಿಯುತ್ತಾರೆ. ಆ ರೀತಿ ನನ್ನ ಅಜ್ಜ ಬದುಕಿದ್ದ ಸಮಯದಲ್ಲಿ ಒಟ್ಟು ಕುಟುಂಬದ ಆದಾಯಾದಿಂದ ಇಬ್ಬರು ಹೆಣ್ಣುಮಕ್ಕಳ ಮದುವೆಯನ್ನು ಮಾಡಿ ಉಳಿದ 3 ಗಂಟು ಮಕ್ಕಳಿಗೆ ಆಸ್ತಿಯನ್ನು ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನಾವು ಸೇರಿ, ನಾವು ಹೆಣ್ಣುಮಕ್ಕಳು ಆಗಿರುವುದರಿಂ ನಮಗೆ ಜಮೀನು ಬೇಡ ಬಸವನಗುಡಿಯಲ್ಲಿರುವ  ಮನೆಯನ್ನು ಕೊಡಿ ಎಂದು ನಾವೇ ಕೇಳಿ ಬರೆಯಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಸದರಿ ಬಸವನಗುಡಿಯಲ್ಲಿರುವ ಮನೆ ಕಾಳಪ್ಪಶೆಟ್ಟಿಯವರ  ಹೆಸರಿನಲ್ಲಿ ಇದ್ದು, ಸದರಿ ಕಾಳಪ್ಪಶೆಟ್ಟಿಯವರು ಪೌತಿಯಾದ ನಂತರ  ನನ್ನ ಚಿಕ್ಕಪ್ಪಂದಿರ ಒಪ್ಪಿಗೆಯ ಮೇರೆಗೆ ನನ್ನಶತಾಯಿಯ ಹೆಸರಿಗೆ ಸದರಿ ಮನೆಯ ಖಾತೆಯನ್ನು ಬದಲಾವಣೆ ಮಾಡಿಕೊಳ್ಳಲಾದೆ ಎಂದರೆ  ಸರಿಯಲ್ಲ. ಇವತ್ತಿಗೂ ಸದರಿ  ಮನೆಯ ಖಾತೆ ನಮ್ಮ ತಾಯಿಯ ಹೆಸರಿನಲ್ಲಿ ಮುಂದುವರೆದುರೆಯುತ್ತಿದ್ದು ಅದಕ್ಕೆ ಕಂದಾಯವನ್ನು ಕೂಡ ನಮ್ಮ ತಾಯಿಯೇ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಕಾಳಪ್ಪಶೆಟ್ಟಿಯವರು 2004 ರಲ್ಲಿ ಪೌತಿಯಾಗಿರುತ್ತಾರೆ. ನನ್ನ ಅಜ್ಜ ಬದುಕಿದ್ದ ಸಂದರ್ಭದಲ್ಲಿಯೇ ಅವರು  ಎಲ್ಲರಿಗೂ ಸ್ವತ್ತುಗಳನ್ನು ಹಿಸ್ಸೆ ಮಾಡಿಕೊಟ್ಟ ಕಾರಣ ನಾವು ಆ ರೀತಿ ಪ್ರತ್ಯೇಕವಾಗಿ ಸ್ವಾಧೀನವನ್ನು ಹೊಂದಿಕೊಂಡು ಬರುತ್ತಿದ್ದು, ಮತ್ತು ಅವುಗಳಲ್ಲಿ ಕೇಲವು ಸ್ವತ್ತುಗಳನ್ನು ಮಾರಾಟ ಮಾಡಿದ್ದು , ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಿಸ್ಸಾ ಹಕ್ಕು ಇಲ್ಲದೇ ಇದ್ದರೂ ಕೂಡ ಸುಳ್ಳು ದಾವೆಯನ್ನು ಹಾಕಲಾಗಿದೆ ಎಂದರೆ ಸರಿಯಲ್ಲ.

ಸ.ನಂಃ 59/1 ಮತ್ತು 59/2 ರ ಖಾತೆ  ಪ್ರಸ್ತುತ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನೋಡಿಲ್ಲ. ಸದರಿ ದಾಖಲೆಗಳನ್ನು ಪರಿಶೀಲಿಸಲು ನನಗೆ ತೊಂದರೆ ಇತ್ತು. ನನ್ನ ಚಿಕ್ಕಪ್ಪನಾದ ಹನುಮಂತಶೆಟ್ಟಿಯವರ ಹಿಸ್ಸೆಗೆ ಬಂದ ಸ್ವತ್ತನ್ನು 2018 ನೇ ಇಸವಿಯಲ್ಲಿ ಅವರ ಮಕ್ಕಳಿಗೆ ನೋಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ ಸದರಿ ಸಮಯದಲ್ಲಿ  ಹನುಮಂತಶೆಟ್ಟಿಯವರ ಹೆಣ್ಣುಮಕ್ಕಳು  ತಲಾ 5 ಲಕ್ಷ ರೂ.ಗಳನ್ನು ಪಡೆದುಕೊಂಡು ಹನುಮಂತಶೆಟ್ಟಿಯವರು ಏಕೈಕ ಮಗನಿಗೆ ಸ್ವತ್ತನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದ ರೀತ್ಯಾ ನರಸಿಂಹರವರ ಹಿಸ್ಸೆಗೆ ಸನಂಃ 59/3 ರಲ್ಲಿ 2 ಎಕರೆ 1 ಗುಂಟೆ ಹಾಗೂ ಸ.ನಂಃ 59/1 ಎ 2 ರಲ್ಲಿ 21 ಗುಂಟೆ  ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.  ಸದರಿ ನರಸಿಂಹರವರ ಹಿಸ್ಸೆಗೆ ಬಂದ ಸ್ವತ್ತಿನಲ್ಲಿ ಅವರು ಸ್ವಾಧೀನವನ್ನು ಹೊಂದಿಕೊಂಡು ಬರುತ್ತಿದ್ದು ಸ್ವತ್ತಿನ ಅಭಿವೃದ್ದಿಗಾಗಿ ಬ್ಯಾಂಕಿನಿಂದ ಸಾಲವನ್ನು ಕೂಡ

ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಅವರಿಬ್ಬರ ಜಗಳ ಬಂದು, ಮತ್ತೆ ದಾವೆಯನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

ಆ ರೀತಿ ನನ್ನ ಚಿಕ್ಕಪ್ಪ ಮತ್ತು ನರಸಿಂಹರವರ ಹಿಸ್ಸೆಗೆ ಬಂದ ಜಮೀನನ್ನು ಬ್ಯಾಂಕ್ ಗೆ ನೋಂದಾಯಿತ ಅಡಮಾನ ಮಾಡಿ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ವಿಭಾಗ ಪತ್ರದ ದೃಡೀಕೃತ ನಕಲನ್ನು ತೋರಿಸಲಾಗಿ ಸದರಿ ವಿಭಾಗ ಪತ್ರವೇ ನಿಮ್ಮ ಚಿಕ್ಕಪ್ಪ ಮತ್ತು ನರಸಿಂಹರವರು ಮಾಡಿಕೊಂಡಿರುವ ವಿಭಾಗ ಪತ್ರ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಅವರವರೇ ಸೇರಿಕೊಂಡ ಏನೋ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಅಡಮಾನ ಪತ್ರದ ದೃಡೀಕೃತ ನಕಲನ್ನು ತೋರಿಸಿ ಇದುವೇ ನಿಮ್ಮ ಚಿಕ್ಕಪ್ಪ ಮತ್ತು ನರಸಿಂಹರವರು ಬ್ಯಾಂಕ್ ಗೆ ಜಮೀನನ್ನು ಅಡಮಾನ ಮಾಡಿರುವುದಕ್ಕೆ ಸಂಬಂಧಪಟ್ಟ ಅಡಮಾನ ಪತ್ರ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ.

1992 ರಲ್ಲಿಯೇ ನಮ್ಮ ಹಿಸ್ಸಾ ಸ್ವತ್ತನ್ನು ಮಾರಾಟ ಮಾಡಿರುವುದರಿಂದ ಹಾಗೂ ನಾವು ಹೆಚ್ಚುವರಿ ಸ್ವತ್ತನ್ನು ಹಿಸ್ಸೆಯಾಗಿ ಪಡೆದುಕೊಂಡಿರುವುದರಿಂದ ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಿಸ್ಸಾ ಹಕ್ಕು ಇಲ್ಲದೇ ಇದ್ದರೂ ಕೂಡ ನಾನು ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಒಟ್ಟು ಕುಟುಂಬದ ಕೆಲವು ಸದಸ್ಯರುಗಳನ್ನು ಮತ್ತು ಕೆಲವು ಒಟ್ಟು ಕುಟುಂಬದ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸದೇ ಇರುವುದರಿಂದ ಈ ದಾವೆ ಉರ್ಜಿತವಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ತಿಳಿಯುತ್ತದೆ ಎಂದು ಅವರನ್ನು ನ್ಯಾಯಾಲಯಕ್ಕೆ ಬರದಂತೆ ಮಾಡಿ ನಾನು ನ್ಯಾಯಾಲಯಕ್ಕೆ ಹಾಜರಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

( ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿಯ ಪರ ವಕೀಲರು ಸಮಯಾವಕಾಶವನನ್ನು ಕೋರಿದ್ದು ಅನುಮತಿಲಾಯಿತು. )

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.